**OS- 121/2018 P.W.1**

ದಿನಾಂಕ 26.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>**ಪಾಟೀ ಸವಾಲು ಃ**</u> ಪ್ರತಿವಾದಿಯ ಪರ ವಕೀಲರಿಂದ ಃ-

ನನ್ನ ತಾತನ ಹೆಸರು ಮಲ್ಲಪ್ಪ ಎಂದರೆ ಸರಿ. ನನ್ನ ತಾತನಿಗೆ 4 ಜನ ಮಕಲ್ಕಳು ಎಂದರೆ ಸರಿ. 1) ಬಸಪ್ಪ 2) ಚಂದಪ್ಪ 3) ಮಹೇಶ್ವರಪ್ಪ 4) ದಶರಪ್ಪ. ನಾನು ಮಹೇಶ್ವರಪ್ಪನ ಮಗ ಎಂದರೆ ಸರಿ. ದಾವಾ ಆಸ್ತಿ ಈ ಹಿಂದೆ ನನ್ನ ದೊಡಪ್ಪನಾದ ಬಸಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಖಾತೆಯು ಒಪ್ಪಿಗೆ ಮೇರೆಗೆ ನನ್ನ ಹೆಸರಿಗೆ ಖಾತೆ ಆಗಿದೆ ಎಂದರೆ ಸರಿ. ದಾವಾ ಸರ್ವೇ ನಂಬರ್ ನ ಪೈಕಿ 6 ಗುಂಟೆ ಜಮೀನನ್ನು ನನ್ನ ದೊಡ್ಡಪ್ಪನಾದ ಬಸಪ್ಪನವರು ದಿನಾಂಕ 01.09.1969 ರಂದು 1 ನೇ ಪ್ರತಿವಾದಿಯ ತಂದೆಯವರಾದ ಹಾಲಪ್ಪನವರಿಗೆ ಶುದ್ಧಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡಪ್ಪನಾದ ಬಸಪ್ಪನವರು ದಿನಾಂಕ 12.12.1963 ರಲ್ಲಿ ದಾವಾ ಆಸ್ತಿಯ ಸರ್ವೇ ನಂಬರ್ ನ ಪೈಕಿ ಪೂರ್ವ ಪಶ್ಚಿಮ 12 ಗಜ, ಉತ್ತರ ದಕ್ಷಿಣ 13 ಗಜವನ್ನು 2 ನೇ ಪ್ರತಿವಾದಿಯ ತಂದೆಯಾದ ಈಶ್ವರಪ್ಪನವರಿಗೆ ಶುದ್ದ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿ ಮನೆಯನ್ನು ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. 2 ನೇ ಪ್ರತಿವಾದಿಯು ದಾವಾ ಅಸ್ತಿಯಲ್ಲಿ ಸುಮಾರು 7-8 ವರ್ಷಗಳ ಹಿಂದೆ ಮನೆಯನ್ನು ಕಟ್ಟಿಸಿರುತ್ತಾರೆ. ಕ್ರಯಪತ್ರದ ಅನ್ವಯ 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ ದಾವಾ ಸರ್ವೇ ನಂಬರ್ ನ ಒಟ್ಟು ವಿಸ್ತೀರ್ಣದ ಪೈಕಿ 6 ಗುಂಟೆ ಜಮೀನು ಮ್ಯುಟೇಷನ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಪತ್ರದ ಅನ್ವಯ 1 ನೇ ಪ್ರತಿವಾದಿಯ ತಂದೆಯ ಹೆಸರಿಗೆ ಖಾತೆ ಆಗಿಲ್ಲ ಎಂಬುದವರ ಬಗ್ಗೆ 1 ನೇ ಪ್ರತಿವಾದಿಯು ನನ್ನ ವಿರುದ್ದ ಎ ಸಿ ನ್ಯಾಯಾಲಯದಲ್ಲಿ ಒಂದು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿಯನ್ನು ಈ ದಾವೆಯನ್ನು ಹೂಡುವುದಕ್ಕಿಂತ ಮುಂಚೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಮುಂದುವರೆದು ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಎ ಸಿ ನ್ಯಾಯಾಲಯದ ಆದೇಶದ ಪ್ರಕಾರ ಸಿವಿಲ್ ನ್ಯಾಯಾಲಯದಲ್ಲಿ ವಿವಾದವನ್ನು ಬರೆಹರಿಸಿಕೊಳ್ಳಿ ಎಂದು ನಮೂದು ಮಾಡಿ ಮೇಲ್ಮನವಿ ವಜಾ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಎ ಸಿ ನ್ಯಾಯಾಲಯದಲ್ಲಿ ನನ್ನ

ಪರವಾಗಿ ವಕೀಲರನ್ನು ನೇಮಕ ಮಾಡಿಕೊಂಡು ತಕರಾರನ್ನು ಸಹ ಸಲ್ಲಿಸಿರುತ್ತೇನೆ. ದಾವಾ ಆಸ್ತಿಗೆ ನಾನು ಹಕ್ಕುದಾರನಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಸೇರಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

(ಶಿವಕುಮಾರ್ ಆರ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.